**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ: 93/2020**

| | | |
|---|---|---|
| ಫಿರ್ಯಾದಿಃ | | ಸರಕಾರದ ಪರವಾಗಿ<br>ಪೋಲಿಸ್ ವೃತ ನಿರೀಕ್ಷಕರು,<br>ಹೊನ್ನಾವರ ವೃತ್ತ, ಹೊನ್ನಾವರ. |
| | | -ವಿರುದ್ಧ- |
| ಆರೋಪಿಃ | 1) | ಸಜ್ಜಾದ ಅಹ್ಮದ ತಂದೆ ಕುತುಬುದ್ದಿನ ಗನಿ,<br>ವಯಸ್ಸುಃ 28 ವರ್ಷಗಳು,<br>ಉದ್ಯೋಗಃ ಅಡಿಕೆ ವ್ಯಾಪಾರ,<br>ಸಾಕೀನಃ ತೊಹಿದಮೊಹಲ್ಲಾ, ಚಂದಾವರ,<br>ತಾಲೂಕುಃ ಹೊನ್ನಾವರ. |
| | 2) | ಮುಬಾಶೀರ ತಂದೆ ಕುತುಬುದ್ದಿನ ಗನಿ,<br>ವಯಸ್ಸುಃ30 ವರ್ಷಗಳು,<br>ಉದ್ಯೋಗಃ ಇಲೆಕ್ಟ್ರೀಷಿಯನ್ ಕೆಲಸ,<br>ಸಾಕೀನಃ ತೊಹಿದಮೊಹಲ್ಲಾ, ಚಂದಾವರ,<br>ತಾಲೂಕುಃ ಹೊನ್ನಾವರ. |

**ದೋಷಾರೋಪಣೆ**

ಶ್ರೀ ಕುಮಾರ ಜಿ, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರಾದ ನೀವು ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನ ಹೊರೆಸುತ್ತಿದ್ದೇನೆ.

ದಿನಾಂಕಃ 17-07-2020 ರಂದು ಬೆಳಗಿನಜಾವಾ 01-30 ಗಂಟೆಯ ಸಮಯದಲ್ಲಿ ಆರೋಪಿತರಾದ ನೀವು ಹೊನ್ನಾವರ ಪೋಲಿಸ್ ಠಾಣಾ ಸರಹದ್ದಿನಲ್ಲಿರುವ ಹೊನ್ನಾವರ ತಾಲೂಕು ಕಡತೋಕಾ, ಜಡ್ಡಿಗದ್ದೆ ಸರ್ಕಾರಿ ಆಸ್ಪತ್ರೆ ಹತ್ತಿರ ಇರುವ ಚಾಸಾ-1 ಶ್ರೀ ಅನಂತ ತಂದೆ ಸೀತಾರಾಮ

ಭಂಡಾರಿರವರ ಮನೆಯಲ್ಲಿ ಮನೆಯ ಮುಂದಿನ ಬಾಗಿಲಕ್ಕೆ ಹಾಕಿದ್ದ ಕೊಂಡಿಯನ್ನು ಕಬ್ಬಿಣದ ರಾಡಿನಿಂದ ಮುರಿದು ಹಾಗೂ ದೇವರ ಕೋಣೆಯಲ್ಲಿದ್ದ ಕಬ್ಬಿಣದ ಕಪಾಟನ್ನು ಕಬ್ಬಿಣದ ಅಗಲವಾದ ಚುಪಾದ ರಾಡಿನಿಂದ ಮುರಿದು ಬಾಗಿಲನ್ನು ತೆಗೆದು ಅದರಲ್ಲಿದ್ದ ಎರಡು ಬಂಗಾರದ ಮೂಗುತಿ ಅಂದಾಜು ರೂ.2,500-00 ಕಳ್ಳತನ ಮಾಡಿಕೊಂಡು ಹೋಗಿದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 457 ಮತ್ತು 380 ರಡಿಯಲ್ಲಿ ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಸದರಿ ದೋಷಾರೋಪಣೆಯನ್ನ ಆರೋಪಿ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಆತ ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

ದಿನಾಂಕಃ 12-11-2021

ಸ್ಥಳಃ ಹೊನ್ನಾವರ.

**(ಶ್ರೀ ಕುಮಾರ ಜಿ.,)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಕಂಡಾಧಿಕಾರಿಗಳು, ಹೊನ್ನಾವರ.**